**ಕನ್ನಡ ವಿಶ್ವವಿದ್ಯಾಲಯ, ಹಂಪಿ**
**ವಿದ್ಯಾರಣ್ಯ, ಹೊಸಪೇಟೆ, ಬಳ್ಳಾರಿ ಜಿಲ್ಲೆ, ಕರ್ನಾಟಕ -೫೮೩ ೨೭೬**

**ಕುಲಸಚಿವರು**

ಸಂಖ್ಯೆ: ಕವಿಹಂ/ಕುಸ/ಕಾಕಾಸ೧೯೫/೨೦೧೮-೧೯

ಜುಲೈ ೨೧, ೨೦೧೮

ಮಾನ್ಯರೆ,

ವಿಷಯ : **ಜುಲೈ ೦೯, ೨೦೧೮ ರಂದು ನಡೆದ ಕಾರ್ಯಕಾರಿ ಸಮಿತಿಯ ೧೯೫ನೇ ಸಭೆಯ ನಡವಳಿಗಳು.**

* * *

**ಜುಲೈ ೦೯, ೨೦೧೮** ರಂದು ನಡೆದ ಕನ್ನಡ ವಿಶ್ವವಿದ್ಯಾಲಯದ **ಕಾರ್ಯಕಾರಿ ಸಮಿತಿಯ ೧೯೫ನೇ ಸಭೆಯ ನಡವಳಿಗಳ** ಪ್ರತಿಯನ್ನು ಈ ಪತ್ರದೊಂದಿಗೆ ತಮ್ಮ ಅವಗಾಹನೆಗಾಗಿ ಕಳುಹಿಸಿಕೊಡಲಾಗಿದೆ. ಈ ನಡವಳಿಗಳಲ್ಲಿ ಏನಾದರೂ ತಿದ್ದುಪಡಿಗಳಿದ್ದರೆ ದಯವಿಟ್ಟು ೧೦ ದಿನಗಳೊಳಗಾಗಿ ಕುಲಸಚಿವರ ಕಾರ್ಯಾಲಯಕ್ಕೆ ಕಳುಹಿಸಿಕೊಡಲು ಕೋರಿದೆ. ತಮ್ಮ ಸೂಚನೆಗಳು ನಿಗದಿತ ಅವಧಿಯೊಳಗೆ ಬಾರದಿದ್ದರೆ ಈ ನಡವಳಿಗಳಿಗೆ ತಮ್ಮ ಸಮ್ಮತಿ ಇದೆಯೆಂದು ತಿಳಿಯಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು
ಕನ್ನಡ ವಿಶ್ವವಿದ್ಯಾಲಯ,ಹಂಪಿ
ವಿದ್ಯಾರಣ್ಯ

**ಇವರಿಗೆ,**

೧. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, (ವಿಶ್ವವಿದ್ಯಾಲಯ) ೬ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು-೫೬೦ ೦೦೧
೨. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ವಿಧಾನಸೌಧ, ಬೆಂಗಳೂರು-೫೬೦ ೦೦೧
೩. ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಕಾಸಸೌಧ, ಬೆಂಗಳೂರು-೫೬೦ ೦೦೧
೪. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ವಸ್ತುಸಂಗ್ರಹಾಲಯ ಆವರಣ, ಮೈಸೂರು
೫. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೫೬೦ ೦೦೨
೬. ಶ್ರೀ ಅಲ್ಲಮಪ್ರಭು ಬೆಟ್ಟದೂರು, ಸಾಹಿತಿಗಳು, 'ಅಮರ ಚೇತನ' ತಳವಗೇರಿ ಕಾಲೋನಿ ಕಲ್ಯಾಣನಗರ, ಕಿನ್ನಾಳ ರಸ್ತೆ, ಕೊಪ್ಪಳ- ೫೮೩ ೨೩೧
೭. ಪ್ರೊ. ಎ.ವಿ. ನಾವಡ, ನಂ.೩೦೧, ಎಬೋಡ್, ಅಪಾರ್ಟಮೆಂಟ್, ಕಲ್ಪನಾ ರಸ್ತೆ ವಾಸ್ ಲೇನ್, ಮಂಗಳೂರು- ೫೭೫ ೦೦೨
೮. ಡಾ. ವೀರಣ್ಣ ರಾಜೂರ, 'ಅರಿವು', ನಂ.೭, ಡಾ. ವಿ.ಕೃ. ಗೋಕಾಕ್ ರಸ್ತೆ, ಬಾರಾಕೊಟ್ರಿ, ಧಾರವಾಡ- ೫೮೦ ೦೦೭
೯. ಪ್ರೊ. ಸಿದ್ದಲಿಂಗಯ್ಯ, ಸಾಹಿತಿಗಳು, ನಂ. ೩೯೮, ೪ನೇ ಅಡ್ಡರಸ್ತೆ, ೪೩ ನೇ ಮುಖ್ಯ ರಸ್ತೆ, ಐಡಿಯಲ್ ಹೋಂ ಟೌನ್‌ಶಿಪ್, ರಾಜರಾಜೇಶ್ವರಿನಗರ, ಬೆಂಗಳೂರು
೧೦. ಡಾ. ಓ. ಓಬಯ್ಯ, ನಿವೃತ್ತ ಪ್ರಾಧ್ಯಾಪಕರು, ಶಿಕ್ಷಣ ತಜ್ಞರು, #೧೨೭, ಓಂ ಸಾಯಿಕೃಪ, ೬ನೇ ಕ್ರಾಸ್, ಬಾಪೂಜಿ ಲೇಔಟ್, ವಿಜಯನಗರ, ೨ನೇ ಹಂತ, ಬೆಂಗಳೂರು-೪೦
೧೧. ಶ್ರೀಮತಿ ಮಹಾದೇವಿ ಗೋಕಾಕ್, ಪಲ್ಲವಿ ನಿವಾಸ, ಧನ್ವಂತರಿ ಆಸ್ಪತ್ರೆ ಹಿಂದುಗಡೆ, ಮನಗೊಳಿ ರಸ್ತೆ, ವಿಜಯಪುರ- ೫೮೬ ೧೦೧
೧೨. ಶ್ರೀ ಸರಜೂ ಕಾಟ್ಕರ್, 'ಕಾವ್ಯ' ಎಂ.ಐ.ಜಿ- ೧೨೫, ಮಹಾಂತೇಶನಗರ, ಬೆಳಗಾವಿ- ೫೯೦ ೦೧೬
೧೩. ಡಾ. ಕೆ. ಷರೀಫಾ, ನಂ-೫ಎ, ೧ನೇ ಮಹಡಿ, ೧ನೇ ಬ್ಲಾಕ್, ೨ನೇ ಮೇನ್, ಬ್ಯಾಂಕ್ ಆಫ್ ಇಂಡಿಯಾ ಎದುರು ಆರ್.ಟಿ ನಗರ, ಬೆಂಗಳೂರು- ೫೬೦ ೦೩೨
೧೪. ಡಾ. ಎ. ಸುಬ್ಬಣ್ಣ ರೈ, ಡೀನ್, ಭಾಷಾ ನಿಕಾಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ
೧೫. ಡಾ. ಮಂಜುನಾಥ ಬೇವಿನಕಟ್ಟಿ, ಡೀನ್, ಸಮಾಜ ವಿಜ್ಞಾನಗಳ ನಿಕಾಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ
೧೬. ಡಾ. ಅಶೋಕಕುಮಾರ ರಂಜೇರೆ, ಡೀನ್, ಲಲಿತ ಕಲೆಗಳ ನಿಕಾಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ
೧೭. ಡಾ. ಸಿ.ಮಹದೇವ, ಡೀನ್, ವಿಜ್ಞಾನಗಳ ನಿಕಾಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ
೧೮. ಡಾ. ಸಿದ್ಧಗಂಗಮ್ಮ, ಹಣಕಾಸು ಅಧಿಕಾರಿಗಳು, ಹಣಕಾಸು ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

**ಪ್ರತಿಗಳು**

೦೧. ಮಾನ್ಯ ಕುಲಪತಿಗಳ ಆಪ್ತಶಾಖೆ, ಕ.ವಿ.ಹಂ. ೦೨. ಸಹಾಯಕ ಕುಲಸಚಿವರು, ಆಡಳಿತ, ಕ.ವಿ.ಹಂ. ೦೩. ಕಚೇರಿ ಪ್ರತಿ

ದೂರವಾಣಿ ಸಂಖ್ಯೆ ಕಚೇರಿ : ೦೮೩೯೪ - ೨೪೧೩೩೫ ಮೊಬೈಲ್ : ೯೪೪೮೦೪೮೯೧೫

# ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

## ಜುಲೈ ೦೯, ೨೦೧೮ರ ಸೋಮವಾರದಂದು ನಡೆದ ಕಾರ್ಯಕಾರಿ ಸಮಿತಿ ೧೯೫ನೇ ಸಭೆಯ ನಡೆವಳಿಗಳು

ಸಭೆಯಲ್ಲಿ ಉಪಸ್ಥಿತರಿದ್ದವರು:

| | |
|---|---|
| ೦೧. ಡಾ. ಮಲ್ಲಿಕಾ. ಎಸ್. ಘಂಟಿ, ಮಾನ್ಯ ಕುಲಪತಿಗಳು, ಕ.ವಿ.ಹಂ. | : ಅಧ್ಯಕ್ಷರು |
| ೦೨. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೩. ಶ್ರೀ ಅಲ್ಲಮಪ್ರಭು ಬೆಟ್ಟದೂರು, ಕೊಪ್ಪಳ | : ಸದಸ್ಯರು |
| ೦೪. ಪ್ರೊ. ಎ.ವಿ. ನಾವಡ, ಮಂಗಳೂರು | : ಸದಸ್ಯರು |
| ೦೫. ಡಾ. ವೀರಣ್ಣ ರಾಜೂರ, ಧಾರವಾಡ | : ಸದಸ್ಯರು |
| ೦೬. ಪ್ರೊ. ಸಿದ್ಧಲಿಂಗಯ್ಯ, ಬೆಂಗಳೂರು | : ಸದಸ್ಯರು |
| ೦೭. ಡಾ. ಓ. ಓಬಯ್ಯ, ನಿವೃತ್ತ ಪ್ರಾಧ್ಯಾಪಕರು, ಬೆಂಗಳೂರು | : ಸದಸ್ಯರು |
| ೦೮. ಶ್ರೀಮತಿ ಮಹಾದೇವಿ ಗೋಕಾಕ್, ವಿಜಯಪುರ | : ಸದಸ್ಯರು |
| ೦೯. ಶ್ರೀ ಸರಜೂ ಕಾಟ್ಕರ್, ಬೆಳಗಾವಿ | : ಸದಸ್ಯರು |
| ೧೦. ಡಾ. ಕೆ. ಷರೀಫಾ, ಬೆಂಗಳೂರು | : ಸದಸ್ಯರು |
| ೧೧. ಡಾ. ಎ. ಸುಬ್ಬಣ್ಣ ರೈ, ಡೀನ್, ಭಾಷಾ ನಿಕಾಯ, ಕವಿಹಂ | : ಸದಸ್ಯರು |
| ೧೨. ಡಾ. ಮಂಜುನಾಥ ಬೇವಿನಕಟ್ಟಿ, ಡೀನ್, ಸಮಾಜ ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೧೩. ಡಾ. ಅಶೋಕಕುಮಾರ ರಂಜೇರೆ, ಡೀನ್, ಲಲಿತಕಲೆಗಳ ನಿಕಾಯ, ಕವಿಹಂ | : ಸದಸ್ಯರು |
| ೧೪. ಡಾ. ಸಿ.ಮಹಾದೇವ, ಡೀನ್, ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೧೫. ಡಾ. ಸಿದ್ಧಗಂಗಮ್ಮ, ಹಣಕಾಸು ಅಧಿಕಾರಿಗಳು, ಕವಿಹಂ | : ವಿಶೇಷ ಆಹ್ವಾನಿತರು |
| ೧೬. ಡಾ. ಪಿ. ಮಹಾದೇವಯ್ಯ, ಕುಲಸಚಿವರು, ಕವಿಹಂ | : ಪದನಿಮಿತ್ತ ಕಾರ್ಯದರ್ಶಿ |

ಸಭೆಯಲ್ಲಿ ಅನುಪಸ್ಥಿತರಿದ್ದವರು:

| | |
|---|---|
| ೦೧. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| ೦೨. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು | : ಸದಸ್ಯರು |
| ೦೩. ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೪. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | : ಸದಸ್ಯರು |

ಸಭೆಯ ಆರಂಭದಲ್ಲಿ ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು. ನಂತರ ಮಂಡಿಸಲಾದ ಕಾರ್ಯಸೂಚಿಯನ್ನು ಕುರಿತು ಚರ್ಚಿಸಿ ಈ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ವಿಷಯ : ದಿನಾಂಕ ೩೦.೦೫.೨೦೧೮ರಂದು ನಡೆದ ಕಾರ್ಯಕಾರಿ ಸಮಿತಿಯ ೧೯೪ನೇ ಸಭೆಯ ನಡೆವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು. (ಅನುಬಂಧ-೦೧)

ನಿರ್ಣಯ : ದಿನಾಂಕ ೩೦.೦೫.೨೦೧೮ರಂದು ನಡೆದ ಕಾರ್ಯಕಾರಿ ಸಮಿತಿಯ ೧೯೪ನೇ ಸಭೆಯ ನಡೆವಳಿಗಳನ್ನು ಪರಿಶೀಲಿಸಿ ಸ್ಥಿರೀಕರಣಕ್ಕೆ ಅನುಮೋದನೆ ನೀಡಿತು.

ವಿಷಯ : ದಿನಾಂಕ ೩೦.೦೫.೨೦೧೮ರಂದು ನಡೆದ ಕಾರ್ಯಕಾರಿ ಸಮಿತಿಯ ೧೯೪ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡುವ ಕುರಿತು.(ಅನುಬಂಧ-೦೨)

ನಿರ್ಣಯ : ದಿನಾಂಕ ೩೦.೦೫.೨೦೧೮ರಂದು ನಡೆದ ಕಾರ್ಯಕಾರಿ ಸಮಿತಿಯ ೧೯೪ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡಿತು.

೧೯೫. ೦೧ ದೂರಶಿಕ್ಷಣ ನಿರ್ದೇಶನಾಲಯದ ೨೦೧೮-೧೯ನೇ ಸಾಲಿನ ವಾರ್ಷಿಕ ಶೈಕ್ಷಣಿಕ ವೇಳಾಪಟ್ಟಿ ಅಧಿಸೂಚನೆಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ದೂರಶಿಕ್ಷಣ ನಿರ್ದೇಶನಾಲಯದ ೨೦೧೮-೧೯ನೇ ಸಾಲಿನ ವಾರ್ಷಿಕ ಶೈಕ್ಷಣಿಕ ವೇಳಾಪಟ್ಟಿ ಅಧಿಸೂಚನೆ ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೧೯೫. ೦೨ ದೂರಶಿಕ್ಷಣ ನಿರ್ದೇಶನಾಲಯದ ೨೦೧೮-೧೯ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ನಡೆಯುವ ಕೋರ್ಸುಗಳ ಪಠ್ಯಕ್ರಮಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ದೂರಶಿಕ್ಷಣ ನಿರ್ದೇಶನಾಲಯದ ೨೦೧೮-೧೯ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ನಡೆಯುವ ಕೋರ್ಸುಗಳ ಪಠ್ಯಕ್ರಮಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೧೯೫. ೦೩ ಕನ್ನಡ ವಿಶ್ವವಿದ್ಯಾಲಯದ ರಕ್ಷಣಾ ಸೇವೆ ಮತ್ತು ಶುಚಿಗೊಳಿಸುವ (ಕಸಗುಡಿಸುವ) ಕೆಲಸವನ್ನು ನಿರ್ವಹಿಸಲು ಇ-ಟೆಂಡರ್ ಮುಖಾಂತರ ಮೆ॥ ಕೌಶಲ್ಯ ಸೆಕ್ಯೂರಿಟಿ ಸರ್ವಿಸ್, ಕಲಬುರ್ಗಿ ಇವರಿಗೆ ೧೨ ತಿಂಗಳ ಗುತ್ತಿಗೆಯನ್ನು ನೀಡಲಾಗಿದೆ. ಈ ಸಂಸ್ಥೆಯ ರಕ್ಷಣಾ ಸಿಬ್ಬಂದಿ ವೆಚ್ಚ ಮಾಸಿಕ ರೂ. ೪,೮೦,೩೯೪/-ರಂತೆ ೧೨ ತಿಂಗಳಿಗೆ ೫೭,೬೪,೭೨೮/- ರೂಗಳಿಗೆ ಮತ್ತು ಶುಚಿಗೊಳಿಸುವ ವೆಚ್ಚ ಮಾಸಿಕ ರೂ. ೨,೮೮,೭೧೮/-ರಂತೆ ೧೨ ತಿಂಗಳಿಗೆ ರೂ. ೩೪,೬೪,೬೧೬/- ರೂಗಳ ವೆಚ್ಚಕ್ಕೆ ಹಾಗೂ ಕಾಲಕಾಲಕ್ಕೆ ಕಾರ್ಮಿಕ ಇಲಾಖೆಯು ನಿಗದಿಪಡಿಸಲಾದ ಕನಿಷ್ಠ ವೇತನ ದರಗಳು ಅನ್ವಯವಾಗುವ ವೆಚ್ಚಕ್ಕೆ ಕಾರ್ಯಕಾರಿ ಸಮಿತಿ ಸಭೆಯ ಘಟನೋತ್ತರ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೧೯೫. ೦೪ ಕುಪ್ಪಳ್ಳಿಯ ಕುವೆಂಪು ಕನ್ನಡ ಅಧ್ಯಯನ ಕೇಂದ್ರದಲ್ಲಿ ಪ್ರತಿನಿಯೋಜನೆ ಮೇಲೆ ದಿನಾಂಕ : ೧೬.೦೬.೨೦೧೬ರಿಂದ ಕಾರ್ಯನಿರ್ವಹಿಸುತ್ತಿರುವ ಪ್ರಾಧ್ಯಾಪಕರಾದ ಡಾ. ಬಿ.ಎಂ. ಪುಟ್ಟಯ್ಯ ಇವರು ಪ್ರತಿನಿಯೋಜನೆಯನ್ನ ಇನ್ನೂ ಎರಡು ವರ್ಷ ಮುಂದುವರೆಸಲು ಹಾಗೂ ಸದರಿ ಕೇಂದ್ರದ ದೇಸಿ ವಸ್ತುಸಂಗ್ರಹಾಲಯಲಕ್ಕೆ ನಿರ್ದೇಶಕರಾಗಿ ನೇಮಿಸಲು ಮನವಿ ಸಲ್ಲಿಸಿದ್ದಾರೆ. ಮಾನ್ಯ ಕುಲಪತಿಗಳು ಕಾರ್ಯಕಾರಿ ಸಮಿತಿಯ ಅನುಮೋದನೆ ಕಾಯ್ದಿರಿಸಿ ಮುಂದಿನ ಆರು ತಿಂಗಳವರೆಗೆ ಪ್ರತಿನಿಯೋಜನೆ ಮುಂದುವರೆಸಲು ಒಪ್ಪಿಗೆ ನೀಡಿದ್ದಾರೆ. ಇದಕ್ಕೆ ಕಾರ್ಯಕಾರಿ ಸಮಿತಿ ಸಭೆಯ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯಗಳನ್ನು ಸಭೆಯು ಪರಿಶೀಲಿಸಿ ಈ ಕೆಳಗಿನಂತೆ ಕ್ರಮವಹಿಸಲು ಸಭೆ ಸೂಚಿಸಿತು.

೧. ಡಾ. ಬಿ.ಎಂ. ಪುಟ್ಟಯ್ಯ ಪ್ರಾಧ್ಯಾಪಕರು ಅವರನ್ನು ಇನ್ನೂ ೨ ವರ್ಷಗಳ ಅವಧಿಗೆ ಕುಪ್ಪಳ್ಳಿಯ ಕುವೆಂಪು ಕನ್ನಡ ಅಧ್ಯಯನ ಕೇಂದ್ರಕ್ಕೆ ನಿಯೋಜಿಸುವುದು.

೨. ಅಲ್ಲಿಯ ಕೋರ್ಸ್‌ಗಳನ್ನು ರದ್ದುಗೊಳಿಸಿ ಅಲ್ಲಿನ ಎಲ್ಲಾ ವಿದ್ಯಾರ್ಥಿಗಳನ್ನು ವಿಶ್ವವಿದ್ಯಾಲಯದ ಆವರಣದಲ್ಲಿಯೇ ವಿದ್ಯಾಭ್ಯಾಸ ಕೈಗೊಳ್ಳಲು ಅನುಕೂಲವನ್ನು ಕಲ್ಪಿಸುವುದು.

೩. ಡಾ.ಕೆ.ಸಿ.ಶಿವಾರೆಡ್ಡಿ, ಪ್ರಾಧ್ಯಾಪಕರು, ಕುಪ್ಪಳಿ ಅಧ್ಯಯನಕೇಂದ್ರ ಇವರ ವಿರುದ್ಧದ ಪ್ರಜಾವಾಣಿ ಪತ್ರಿಕೆ ವರದಿ ಕುರಿತಂತೆ ನಿಷ್ಪಕ್ಷಪಾತ ವಿಚಾರಣೆಗಾಗಿ ಕಾರ್ಯಕಾರಿ ಸಮಿತಿ ಸದಸ್ಯರಾದ ಪ್ರೊ. ಸಿದ್ಧಲಿಂಗಯ್ಯ, ಡಾ. ಸರಜೂ ಕಾಟ್ಕರ್, ಡಾ. ಓ. ಒಬಯ್ಯ ಹಾಗೂ ಡಾ.ಕೆ.ಷರಿಫಾ ಅವರನ್ನೊಳಗೊಂಡ ವಿಚಾರಣೆ ಸಮಿತಿಯನ್ನು ರಚಿಸಿ ಕ್ರಮವಹಿಸಲು ಸಭೆ ತೀರ್ಮಾನಿಸಿತು.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು**

೧೯೫. ೦೫ ೨೦೧೮-೧೯ನೇ ಸಾಲಿನಲ್ಲಿ ದೂರಶಿಕ್ಷಣ ಕೋರ್ಸುಗಳನ್ನು ಮುಂದುವರೆಸುವ ಕುರಿತಂತೆ ದೂರಶಿಕ್ಷಣ ನಿರ್ದೇಶಕರು ದಿನಾಂಕ ೨೮.೦೬.೨೦೧೮ರಂದು ಪತ್ರವನ್ನು ನೀಡಿ ವಿಶ್ವವಿದ್ಯಾಲಯದ ನ್ಯಾಕ್ ಮಾನ್ಯತೆ ೨೦೧೭ರಲ್ಲಿ ಮುಗಿದಿರುವುದರಿಂದ ಮತ್ತು ಯುಜಿಸಿ ಹೊಸ ನಿಯಮಾವಳಿ ಪ್ರಕಾರ (CGP 3.26 on a4 point) ನ್ಯಾಕ್ ಮಾನ್ಯತೆ ಪಡೆಯದೆ ಇರುವುದರಿಂದ ೨೦೧೮-೧೯ನೇ ಸಾಲಿನಲ್ಲಿ ಪದವಿ ಕೋರ್ಸ್‌ಗಳಿಗೆ ಮಾನ್ಯತೆ ನೀಡಲು ಸಾಧ್ಯವಿಲ್ಲವೆಂದು ತಿಳಿಸಿರುವ ಹಿನ್ನೆಲೆಯಲ್ಲಿ ಸದರಿ ಸಾಲಿನ ಪದವಿ ಕೋರ್ಸ್‌ಗಳ ಪ್ರವೇಶಾತಿ ಕುರಿತು ಕಾರ್ಯಕಾರಿ ಸಮಿತಿಯಲ್ಲಿ ಚರ್ಚಿಸಿ ನಿರ್ಣಯಿಸಲು ಕೋರಿದ್ದಾರೆ.

ನಿರ್ಣಯ : ಈ ಕುರಿತು ಸಭೆಯು ಪರಿಶೀಲಿಸಿ ೨೦೧೮-೧೯ನೇ ಸಾಲಿನ ದೂರಶಿಕ್ಷಣ ಕೋರ್ಸ್‌ಗಳನ್ನು ಮುಂದುವರೆಸಲು ಸಭೆ ಸೂಚಿಸಿತು ಹಾಗೂ ಈ ಕೆಳಗಿನಂತೆ ನಿರ್ಣಯಗಳನ್ನು ಕೈಗೊಳ್ಳಲಾಯಿತು.

೧. ವಿಶ್ವವಿದ್ಯಾಲಯವು AAA ಕಮಿಟಿಗೆ ಈಗಾಗಲೇ ವರದಿ ನೀಡಿದೆ.

೨. UGC ನ್ಯಾಕ್ ಫಾರ್ಮೆಟ್ ಬದಲಾಯಿಸಿರುವುದರಿಂದ ತಡವಾಗಿದೆ.

೩. ಹೈದ್ರಾಬಾದ್ ಕರ್ನಾಟಕ ೩೭೧ (ಜೆ) ಅಡಿಯಲ್ಲಿ ಬರುವ ಪ್ರದೇಶವಾಗಿದ್ದರಿಂದ ವಿಶೇಷವಾಗಿ ಅನುಮತಿ ನೀಡುವಂತೆ ಪತ್ರ ಬರೆಯಲು ನಿರ್ಧರಿಸಲಾಯಿತು.

೪. ನ್ಯಾಕ್ ಸಂಬಂಧಿಸಿದ ಅಧ್ಯಕ್ಷರಿಂದ ಪತ್ರ ಬರೆಯಿಸಿ ಕ್ರಮವಹಿಸುವುದು.

೫. ಹೊಸ ಕೋರ್ಸ್‌ಗಳನ್ನು ಆರಂಭಿಸದೆ ಹಳೆಯ ಕೋರ್ಸ್‌ಗಳನ್ನು ಮಾತ್ರ ಮುಂದುವರೆಸುವುದು.

೬. ಈ ಕುರಿತಂತೆ ಪ್ರೊ. ತೇಜಸ್ವಿ ಕಟ್ಟಿಮನಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಪ್ರೊ. ಸಿದ್ಧಲಿಂಗಯ್ಯ, ಡಾ. ಸರಜೂ ಕಾಟ್ಕರ್ ಒಳಗೊಂಡಂತೆ ಸಮಿತಿ ರಚಿಸಿ, ಸಮಿತಿಯ ಎಲ್ಲ ಸದಸ್ಯರು HRD ಮಾನ್ಯ ಮಂತ್ರಿಗಳನ್ನು ಭೇಟ್ಟಿ ಮಾಡಲು ನಿರ್ಧರಿಸಲಾಯಿತು.

೧೯೫. ೦೬ ಮಾನ್ಯ ಕುಲಪತಿಗಳ ಆದೇಶ ಸಂಖ್ಯೆ:ಕವಿಹಂ/ಕುಸ/ಕುಸನೇ/೨೦೧೮-೧೯/೯೬ ದಿನಾಂಕ ೦೨.೦೭.೨೦೧೮ರ ಅನ್ವಯ ಡಾ. ಡಿ. ಪಾಂಡುರಂಗಬಾಬು, ಪ್ರಾಧ್ಯಾಪಕರು ಇವರನ್ನು ಕುಲಸಚಿವರ ಕಾರ್ಯಭಾರದಿಂದ ಬಿಡುಗಡೆಗೊಳಿಸಿ, ಡಾ. ಪಿ. ಮಹಾದೇವಯ್ಯ ಪ್ರಾಧ್ಯಾಪಕರು, ಕನ್ನಡ ಭಾಷಾಧ್ಯಯನ ವಿಭಾಗ ಇವರನ್ನು ಜುಲೈ ೦೨, ೨೦೧೮ರ ಅಪರಾಹ್ನದಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೆ ಕುಲಸಚಿವರ ಪ್ರಭಾರ ನಿಯೋಜನೆ ಮಾಡಿ ಆದೇಶಿಸಿರುವ ಹಿನ್ನೆಲೆಯಲ್ಲಿ ಡಾ. ಪಿ.ಮಹಾದೇವಯ್ಯ ಇವರು ದಿನಾಂಕ ೦೨.೦೭.೨೦೧೮ರ ಅಪರಾಹ್ನದಂದು ಕುಲಸಚಿವರ ಕಾರ್ಯಬಾರವನ್ನು ವಹಿಸಿಕೊಂಡಿದ್ದಾರೆ. ಕುಲಸಚಿವರ ಪ್ರಭಾರ ನಿಯೋಜನೆಯ ಕ್ರಮಕ್ಕೆ ಕಾರ್ಯಕಾರಿ ಸಮಿತಿ ಘಟನೋತ್ತರ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ಕನ್ನಡ ವಿಶ್ವವಿದ್ಯಾಲಯದ ಅಧಿನಿಯಮ ಪ್ರಕರಣ: ೧೫ ಹಾಗೂ ಪರಿನಿಯಮ ಕಂಡಿಕೆ (೨೯)ರ ಅನ್ವಯ ಡಾ.ಪಿ.ಮಹಾದೇವಯ್ಯ ಪ್ರಾಧ್ಯಾಪಕರು, ಕನ್ನಡ ಭಾಷಾಧ್ಯಯನ ವಿಭಾಗ ಇವರನ್ನು ಖಾಯಂ ಆಗಿ ಮುಂದಿನ ಆದೇಶದವರೆಗೆ ಕುಲಸಚಿವರನ್ನಾಗಿ ನೇಮಕ ಮಾಡಲು ಸಭೆ ನಿರ್ಣಯಿಸಿತು.

೧೯೫. ೦೭ ಡಾ. ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಧಾರವಾಡ ಇವರಿಗೆ ೨೦೦೬-೨೦೦೭ನೇ ಸಾಲಿನಲ್ಲಿ ಎಂ.ಫಿಲ್ ಮತ್ತು ಪಿಎಚ್.ಡಿ. ಕೋರ್ಸ್‌ಗಳಿಗೆ ಕನ್ನಡ ವಿಶ್ವವಿದ್ಯಾಲಯದಿಂದ ಮಾನ್ಯತೆಯನ್ನು ನೀಡಲಾಗಿತ್ತು. ಕಾರಣಾಂತರಗಳಿಂದ ೨೦೧೫ನೇ ಸಾಲಿನಲ್ಲಿ ಮಾನ್ಯತೆಯನ್ನು ರದ್ದುಪಡಿಸಲಾಗಿತ್ತು. ದ.ರಾ. ಬೇಂದ್ರೆ ಟ್ರಸ್ಟ್‌ನ ನೂತನ ಅಧ್ಯಕ್ಷರಾದ ಡಾ. ಡಿ.ಎಮ್. ಹಿರೇಮಠ ಇವರು ದಿನಾಂಕ ೦೫.೦೧.೨೦೧೮ರಂದು ಪತ್ರ ಬರೆದು ಸಂಶೋಧನಾ ಕಾರ್ಯವನ್ನು ಮುಂದುವರೆಸುವುದು ಅಗತ್ಯವಾಗಿದ್ದು, ಮಾನ್ಯತೆಗೆ ಅನುಮತಿ ನೀಡಲು ವಿನಂತಿಸಿದ್ದಾರೆ. ಕಾರ್ಯಕಾರಿ ಸಮಿತಿ ಸಭೆಯ ಅವಗಾಹನೆಗಾಗಿ.

ನಿರ್ಣಯ : ಈ ಕುರಿತಂತೆ ಕುಲಪತಿಗಳ ಅಧ್ಯಕ್ಷತೆಯಲ್ಲಿ ಕಾರ್ಯಕಾರಿ ಸಮಿತಿ ಸದಸ್ಯರಾದ ಅಲ್ಲಮಪ್ರಭು ಬೆಟ್ಟದೂರು, ವೀರಣ್ಣ ರಾಜೂರು ಅವರುಗಳನ್ನು ಸದಸ್ಯರನ್ನಾಗಿ ಹಾಗೂ ಅಧ್ಯಯನಾಂಗದ ನಿರ್ದೇಶಕರನ್ನು ಸಂಚಾಲಕರನ್ನಾಗಿ ನಿಯೋಜಿಸಿ ಸಮಿತಿಯನ್ನು ರಚಿಸಿ ಕ್ರಮವಹಿಸಲು ಸಭೆ ನಿರ್ಣಯಿಸಿತು.

೧೯೫. ೦೮ ದಿನಾಂಕ ೦೬.೦೭.೨೦೧೮ರಂದು ನಡೆದ ಪರಿಶಿಷ್ಟಜಾತಿ/ಪರಿಶಿಷ್ಟಪಂಗಡ ವಿಶೇಷ ಘಟಕದ ಸಲಹಾಸಮಿತಿ ನಡೆವಳಿಗೆ ಕಾರ್ಯಕಾರಿಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ದಿನಾಂಕ ೦೬.೦೭.೨೦೧೮ರಂದು ನಡೆದ ಪರಿಶಿಷ್ಟಜಾತಿ/ಪರಿಶಿಷ್ಟಪಂಗಡ ವಿಶೇಷ ಘಟಕದ ಸಲಹಾಸಮಿತಿ ನಡೆವಳಿಗಳಿಗೆ ಸಭೆ ಅನುಮೋದನೆ ನೀಡಿತು. ಹಾಗೂ ಈ ಕೆಳಗಿನ ನಿರ್ಣಯಗಳನ್ನು ಕೈಗೊಳ್ಳಲು ಸಭೆ ತೀರ್ಮಾನಿಸಿತು.

೧. ಸರ್ಕಾರದಿಂದ ಹಣ ಪಡೆದು ವಿಶ್ವವಿದ್ಯಾಲಯವೇ ವಿದ್ಯಾರ್ಥಿಗಳಿಗೆ ಉತ್ತಮ ಲ್ಯಾಪ್‌ಟಾಪ್‌ಗಳನ್ನು ಖರೀದಿಸಿ ವಿತರಿಸಲು ಸಭೆ ಸೂಚಿಸಿತು.

೨. ಕನ್ನಡ ವಿಶ್ವವಿದ್ಯಾಲಯವು ಸಿಮೆಂಟ್ ಶಿಲ್ಪ ಸಂಬಂಧಿಸಿ ಅಂದಾಜು ರೂ.೨೦,೦೦,೦೦೦/- (ಇಪ್ಪತ್ತು ಲಕ್ಷ) ಮೊತ್ತದ ಪ್ರಸ್ತಾವನೆಯನ್ನು ತುರ್ತಾಗಿ ಸಿದ್ಧಪಡಿಸಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರಿಗೆ ಸಲ್ಲಿಸಿ, ಸಂಸ್ಕೃತಿ ಇಲಾಖೆಯ SCP/ TSP ಅನುದಾನವನ್ನು ಪಡೆದು ಯೋಜನೆಯನ್ನು ಕೈಗೊಳ್ಳಲು ಸಭೆ ತೀರ್ಮಾನಿಸಿತು.

೩. ಪ್ರೊ. ಎ.ವಿ.ನಾವಡ ಅವರು ಬುಡಕಟ್ಟು ಭಾಷೆಗಳ ಅಳಿವು-ಉಳಿವಿನ ಬಗ್ಗೆ ಕ್ರಿಯಾಯೋಜನೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಮಂಡಿಸಲು ಸೂಚಿಸಿದರು.

೧೯೫. ೦೯ ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ೩೭೧(ಜೆ) ಹುದ್ದೆಗಳ (ಭರ್ತಿ) ನೇಮಕಾತಿ ಕುರಿತು ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ದಿನಾಂಕ ೨೫.೦೫.೨೦೧೮ ರಂದು ಬರೆದಿರುವ (ಪತ್ರ ಸಂಖ್ಯೆ: ಇಡಿ ೫೭೨ ಯುಎನ್‌ಇ ೨೦೧೭) ಪತ್ರದ ಕುರಿತು.

ನಿರ್ಣಯ : ೧. ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ೧೧(ಹನ್ನೊಂದು) ೩೭೧(ಜೆ) ಹುದ್ದೆಗಳ ನೇಮಕಾತಿಯನ್ನು ರಾಜ್ಯಪಾಲರ ಅನುಮೋದನೆ ಕೋರಿ ಪತ್ರ ಬರೆದು ಭರ್ತಿಮಾಡಿಕೊಳ್ಳಲು ಸಭೆಯು ಸೂಚಿಸಿತು.

೨. ಈಗಾಗಲೇ ಒಂದು ವರ್ಷದ ಹಳೆಯ ಪ್ರಕ್ರಿಯೆಯಾಗಿದ್ದರಿಂದ ಇದನ್ನು ಮುಂದುವರೆಸಲು ಸಭೆ ನಿರ್ಣಯಿಸಿತು.

೧೯೫. ೧೦ ಬಿ.ಕೆ. ಪವಿತ್ರ ಕೇಸ್ ಕುರಿತು ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ಸಂಬಂಧಿಸಿದ ಹಿಂಬಡ್ತಿ /ಮುಂಬಡ್ತಿಗಳ ಬಗೆಗೆ.

ನಿರ್ಣಯ : ಈ ಕುರಿತಂತೆ ಸಭೆಯು ಪರಿಶೀಲಿಸಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ಸಂಬಂಧಿಸಿದಂತೆ ಅಂತಿಮ ತೀರ್ಪು/ಸರ್ಕಾರದ ಆದೇಶ ಬಂದ ನಂತರ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಸೇವಾವಿಷಯಗಳಲ್ಲಿ ಪರಿಣಿತರಾಗಿರುವ ನಿವೃತ್ತ ಸಿಬ್ಬಂದಿಯನ್ನು ಕರೆಯಿಸಿ ಪರಿಶೀಲನೆಮಾಡಿ ಸೂಕ್ತಕ್ರಮವಹಿಸಲು ಸಭೆ ನಿರ್ಣಯಿಸಿತು.

೧೯೫. ೧೧ ಬಾದಾಮಿ ಕೇಂದ್ರದಲ್ಲಿ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುವ ಅಧ್ಯಾಪಕರಿಗೆ ಮಾಸಿಕ ವೇತನ ಹೆಚ್ಚಳ ಕುರಿತು.

ನಿರ್ಣಯ : ಬಾದಾಮಿ ಕೇಂದ್ರದ ತಾತ್ಕಾಲಿಕ ಅಧ್ಯಾಪಕರ ಮಾಸಿಕ ವೇತನ ಹೆಚ್ಚಿಸುವ ಬಗ್ಗೆ ಸಭೆಯು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

೧೯೫. ೧೨ ಉದಯ ಕುಮಾರ್ ತಾತ್ಕಾಲಿಕ ಸಿಬ್ಬಂದಿ ಅವರ ಪತ್ನಿಯನ್ನು ತಾತ್ಕಾಲಿಕವಾಗಿ ನಿಯೋಜಿಸುವ ಕುರಿತು.

ನಿರ್ಣಯ : ಬಂಜಾರಭಾಷಾ ಯೋಜನೆಯಲ್ಲಿ ನಿರ್ಮಾಣಗೊಂಡಿರುವ ಕಟ್ಟಡದ ಸ್ವಚ್ಛತಾ ಕಾರ್ಯವನ್ನು ಮಾಡಲು ತಾತ್ಕಾಲಿಕವಾಗಿ ನಿಯೋಜಿಸಲು ಸಭೆ ಅನುಮತಿಸಿತು. ಸಂಬಳವನ್ನು ಸದರಿ ಯೋಜನೆಯ ಅನುದಾನದಲ್ಲಿ ಭರಿಸುವಂತೆ ಸೂಚಿಸಿತು.

ಕುಲಸಚಿವರ ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

| | |
|---|---|
| ಕುಲಸಚಿವರು | ಕುಲಪತಿಗಳು |
| ಪದನಿಮಿತ್ತ ಕಾರ್ಯದರ್ಶಿ | ಅಧ್ಯಕ್ಷರು |